

ರಾಮಾನುಜನ್ ಅವರ ಪತ್ನಿ ಜಾನಕಿ

ತಿಂಡಿಗಳಿಗೆ ತೊಂದರೆ ಆಯಿತು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ತಮ್ಮ ಸ್ವಭಾವದಿಂದ ಸ್ವಲ್ಪವೂ ಸರಿಯದ ರಾಮಾನುಜನ್, ಕೆಂಬ್ರಿಜ್‌ನ ಹಾಸ್ಟೆಲಿನಲ್ಲಿ ತಿನ್ನದೇ ತಮ್ಮದೇ ಅಡುಗೆಯಲ್ಲಿ ತೊಡಗಿದರು. ಆದರೆ ಅಡುಗೆ ಅವರ ಗಣಿತಕ್ಕೆ ಅಡ್ಡಬರುತ್ತಿತ್ತು. ಹೀಗಾಗಿ ಸಿಕ್ಕ ಯಾವುದೋ ಪಾತ್ರೆಯಲ್ಲಿ ಅನ್ನ ಸಾರು ಮಾಡಿಕೊಂಡು ಸೇವಿಸುತ್ತಿದ್ದರು. ಅವನ ಆರೋಗ್ಯ ಕೆಟ್ಟಿದ್ದರಲ್ಲಿ ಆಶ್ಚರ್ಯವಿಲ್ಲ.

ಊಟಕ್ಕಿಂತಲೂ ರಾಮಾನುಜನ್‌ರನ್ನು ಹೆಚ್ಚು ಬಾಧಿಸಿದ್ದು ಮಾನಸಿಕ ಸಮಸ್ಯೆ. ಅವರು ಎಷ್ಟೇ ಪತ್ರ ಬರೆದರೂ ಹೆಂಡತಿ ಜಾನಕಿಯಿಂದ ಯಾವುದೇ ಕಾಗದ ಬರುತ್ತಿರಲಿಲ್ಲ. ಏಕೆ ಎಂಬುದು ಅರ್ಥವಾಗಲಿಲ್ಲ. ಆಗಿದ್ದು ಇದು. ಅವರು ಬರೆದ ಕಾಗದಗಳು ತಾಯಿಯ ಕೈಸೇರುತ್ತಿದ್ದವು. ಆಕೆ ಆ ಪತ್ರಗಳನ್ನು ಸೊಸೆಗೆ ತೋರಿಸುತ್ತಿರಲಿಲ್ಲ. ಒಂದು ಪೆಟ್ಟಿಗೆಯಲ್ಲಿ ಹಾಕುತ್ತಿದ್ದರು. ಸೊಸೆ ಕಾಗದ ಬರೆದು ಅಂಚೆಗೆ ಹಾಕುವಂತಿರಲಿಲ್ಲ. ಅದು ಅತ್ತೆಯ ಮೂಲಕ ಹೋಗಬೇಕು. ಅತ್ತೆ ಆ ಕಾಗದವನ್ನು ಪೋಸ್ಟ್ ಮಾಡುತ್ತಿರಲಿಲ್ಲ. ಅದೇ ಪೆಟ್ಟಿಗೆಗೆ ಹಾಕುತ್ತಿದ್ದರು.

ಕಡೆಗೆ ಜಾನಕಿ ತನ್ನ ಅಣ್ಣನ ಮದುವೆಯ ಸಲುವಾಗಿ ಕರಾಚಿಗೆ ಹೋದರು, ಹಿಂತಿರುಗಿ ಚೆನ್ನೈಗೆ ಬರಲಿಲ್ಲ. ಆಗ ಅವರು ಬರೆದ ಪತ್ರಗಳು ರಾಮಾನುಜನ್ ಕೈಸೇರಿದವು.

ಆ ವೇಳೆಗೆ ಚಿತ್ತಗ್ಲಾನಿಗೆ ಒಳಗಾಗಿದ್ದ ರಾಮಾನುಜನ್ ಆತ್ಮಹತ್ಯೆಯ ಪ್ರಯತ್ನ ಮಾಡಿದ್ದೂ ಉಂಟು. ಅವರ ಇಷ್ಟದಂತೆ ಹಾರ್ಡಿ ಅವರನ್ನು ಭಾರತಕ್ಕೆ ಹಿಂದಿರುಗುವಂತೆ ಮಾಡಿದರು. 1919ರಲ್ಲಿ ಮುಂಬೈಗೆ ಮರಳಿದ ಅವರಿಗೆ ಆಶ್ಚರ್ಯ ಕಾದಿತ್ತು. ಅವರನ್ನು ಎದುರುಗೊಳ್ಳಲು ತಾಯಿ ಮತ್ತು ತಮ್ಮ ಮಾತ್ರ ಇದ್ದರು. ಜಾನಕಿ ಇರಲಿಲ್ಲ. ಕೂಡಲೇ ರಾಮಾನುಜನ್ ಕೇಳಿದರು:

‘ಅವಳೆಲ್ಲಿ?’

ತಾಯಿಯ ಉತ್ತರ: ‘ಅವಳು ಎಂದರೆ ಯಾರು?’

‘ಅವಳೇ ಜಾನಕಿ.’

‘ಅವಳು ಎಲ್ಲಿದ್ದಾಳೋ ಗೊತ್ತಿಲ್ಲ.’

ಅತ್ತೆ ಸೊಸೆಯರ ನಡುವೆ ಒಂದು ವರ್ಷದಿಂದ ಸಂಪರ್ಕವಿರಲಿಲ್ಲ. ಸೊಸೆ ತನ್ನ ತವರಾದ ರಾಜೇಂದ್ರಂನಲ್ಲಿ ಇದ್ದಾಳೆಯೋ ಅಥವಾ ಅಣ್ಣನ ಮನೆ ಕರಾಚಿಯಲ್ಲಿ ಇದ್ದಾಳೆಯೋ ಕೋಮಲತಾ ಅಮ್ಮಾಳಿಗೆ ಬೇಕಿರಲಿಲ್ಲ.

ಗಂಡ ಭಾರತಕ್ಕೆ ಹಿಂದಿರುಗಿದ ವಿಷಯವನ್ನು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡ ಜಾನಕಿ ಚೆನ್ನೈಗೆ ಬಂದರು. ಗಂಡನ ಶುಶ್ರೂಷೆಯಲ್ಲಿ ತೊಡಗಿಕೊಂಡರು. ರಾಮಾನುಜನ್ ಅಧ್ಯಯನದಲ್ಲಿ ನಿರತರಾಗಿದ್ದಾಗ ಅವರಿಗೆ ನೆರವಾಗತೊಡಗಿದರು. ಆ ಮೊದಲು ಜಾನಕಿ ಹತ್ತಿರ ಬಂದಾಗ ರಾಮಾನುಜನ್ ಕೂಗಾಡುತ್ತಿದ್ದರು. ಈಗವರು ಹೆಂಡತಿಯೊಡನೆ ಅನ್ಯೋನ್ಯವಾಗಿದ್ದರು. ಆಗ ಅವರು ಹೆಂಡತಿಗೆ ಹೇಳಿದ ಒಂದು ಮಾತು ನಿಜಕ್ಕೂ ಮಾರ್ಮಿಕವಾದದ್ದು: ‘ಇಂಗ್ಲೆಂಡಿನಲ್ಲಿ ನೀನು ನನ್ನ ಜೊತೆ ಇದ್ದಿದ್ದರೆ ನಾನು ಬದುಕಿರುತ್ತಿದ್ದೆ ಅನ್ನಿಸುತ್ತೆ’.

ಆದರೆ ಏನು ಪ್ರಯೋಜನ? ರಾಮಾನುಜನ್ ಸಾಯಲಿಕ್ಕೆಂದೇ ಭಾರತಕ್ಕೆ ಮರಳಿದ್ದರು. ಅವರ ಆರೋಗ್ಯ ಅಷ್ಟು ಹದಗೆಟ್ಟಿತ್ತು. ಆ ಸಂದರ್ಭದಲ್ಲಿಯೂ ಅತ್ತೆ ತನ್ನ ಹಟವನ್ನು ಬಿಡಲಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿತ್ತು. ಜಾನಕಿ ಅತ್ತೆಗೆ ಎದುರು ಮಾತನಾಡುವುದನ್ನು ಕಲಿತಿದ್ದರು. ವಿದೇಶದಲ್ಲಿ ಕಾಫಿ ಕುಡಿಯುವುದನ್ನು ಅಭ್ಯಾಸ ಮಾಡಿಕೊಂಡಿದ್ದ ರಾಮಾನುಜನ್ ಕೂಡ ತಾಯಿಗೆ ಮರು ಉತ್ತರ ನೀಡುತ್ತಿದ್ದರು. 5000 ರೂಪಾಯಿ ಖರ್ಚು ಮಾಡಿ ಹೆಂಡತಿಗೆ ಬೆಂಡೋಲೆ ಮತ್ತು ಡಾಬುಗಳನ್ನು ಕೊಂಡು ತಂದಿದ್ದರು.

ಉಪಾಕರ್ಮದ ಸಮಯ. ಜನಿವಾರ ಬದಲಿಸಲು ಒಬ್ಬನೇ ದೇವಸ್ಥಾನಕ್ಕೆ ಹೋಗೆಂದು ತಾಯಿ ಮಗನಿಗೆ ಹುಕುಂ ನೀಡಿದರು. ಅದನ್ನು ಉಲ್ಲಂಘಿಸಿದ ಮಗ ಹೆಂಡತಿಯನ್ನೂ ಕರೆದೊಯ್ದರು.

ಮೂವತ್ತೆರಡರ ವಯಸ್ಸಿನಲ್ಲಿ ರಾಮಾನುಜನ್ (1920) ಸಾವಿಗೀಡಾದರು. ಅವರನ್ನು ನೋಡಿಕೊಳ್ಳುತ್ತಿದ್ದ ವೈದ್ಯ ಚಂದ್ರಶೇಖರ ಅಯ್ಯರ್ ಪ್ರತಿಕ್ರಿಯೆ ನೋಡಿ: ‘ಈ ದುರಂತವನ್ನು ತಡೆಯಬಹುದಿತ್ತು. ಅವರ ಸಂಬಂಧಿಗಳೂ ಇದಕ್ಕೆ ಕಾರಣರಾದರು. ಕಣ್ಣೀರಿಗಿಂತ ಆಳವಾದ ದುರಂತ’. ಮದುವೆಯಾದರೂ ದಾಂಪತ್ಯವನ್ನು ಅನುಭವಿಸದ ಗಂಡ ಹೆಂಡಿರಾದರು, ರಾಮಾನುಜನ್ ಮತ್ತು ಜಾನಕಿ.

ಗಂಡ ತೀರಿಕೊಂಡ ನಂತರ ಜಾನಕಿ ಅವರು ನಾರಾಯಣ್ ಎಂಬ ಹುಡುಗನನ್ನು ದತ್ತು ಪಡೆದು ಸಾಕಿದರು. ಕಸೂತಿ ಮಾಡಿ ಜೀವನ ಸಾಗಿಸಿದ ಅವರ ಮರಣ 1994ರಲ್ಲಿ ಸಂಭವಿಸಿತು. ವೃತ್ತಪತ್ರಿಕೆಗಳನ್ನು ಓದುತ್ತಿದ್ದ ಅವರು, ತಮ್ಮ ಇಳಿ ವಯಸ್ಸಿನಲ್ಲಿ ಮೊಮ್ಮಕ್ಕಳಿಂದ ಪತ್ರಿಕೆ ಓದಿಸುತ್ತಿದ್ದರು. ಈಗ ನಾರಾಯಣ್ ಅವರು ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ ಚೆನ್ನೈನಲ್ಲಿ ವಾಸವಿದ್ದಾರೆ. ರಾಮಾನುಜನ್ ಮನೆಯಲ್ಲಿದ್ದ ಪಾತ್ರೆ, ಪರಟಿ ಮತ್ತು ಪ್ರತಿಮೆಗಳನ್ನು ನಾರಾಯಣ್ ಅವರು ಕಾಪಾಡಿಕೊಂಡು ಬಂದಿದ್ದಾರೆ.

ಚಿತ್ರಕೃಪೆ: ವಿಕಿ ಕಾಮನ್ಸ್

ಪ್ರತಿಕ್ರಿಯಿಸಿ: feedback@sudha.co.in

